सत्यमेव जयते

# ರಾಜ್ಯ ಚುನಾವಣಾ ಆಯೋಗ,

# ಕರ್ನಾಟಕ, ಬೆಂಗಳೂರು

# ನಗರ ಸ್ಥಳೀಯ ಸಂಸ್ಥೆಗಳ ಸಾರ್ವತ್ರಿಕ

# ಚುನಾವಣೆ, 2022

# (ಅಕ್ಟೋಬರ್)

## 2022ನೇ ವರ್ಷದ ಅಕ್ಟೋಬರ್ ಮಾಹೆಯಲ್ಲಿ ವಿಜಯಪುರ ಮಹಾನಗರ ಪಾಲಿಕೆಯ 35 ವಾರ್ಡ್‌ಗಳಿಗೆ ನಡೆದ ಸಾರ್ವತ್ರಿಕ ಚುನಾವಣೆಯ ವರದಿ.

**ವಿಳಾಸ**

ರಾಜ್ಯ ಚುನಾವಣಾ ಆಯೋಗ,

2ನೇ ಮತ್ತು 3ನೇ ಮಹಡಿ, ನಂ. 16,

ಬಳ್ಳಾರಿ ರಸ್ತೆ, ಸದಾಶಿವನಗರ,

ಬೆಂಗಳೂರು-560080.

E.mail: karsec@gmail.com

Website: https://www.karsec.gov.in

# ವಿಜಯಪುರ ಮಹಾನಗರ ಪಾಲಿಕೆ ಸಾರ್ವತ್ರಿಕ ಚುನಾವಣೆ-2022

ವಿಜಯಪುರ ನಗರಸಭೆಗೆ 2013 ರ ಮಾರ್ಚಿ ಮಾಹೆಯಲ್ಲಿ ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಗಿರುತ್ತದೆ. ವಿಜಯಪುರ ನಗರಸಭೆಯ ಪ್ರಥಮ ಸಭೆಯನ್ನು ದಿನಾಂಕ: 15.07.2014 ರಂದು ನಡೆಸಲಾಗಿದ್ದು, ವಿಜಯಪುರ ನಗರಸಭೆಯ ಚುನಾಯಿತ ಸದಸ್ಯರ ಪದಾವಧಿಯು ದಿನಾಂಕ: 15.07.2014 ರಂದು ಪ್ರಾರಂಭವಾಗಿರುತ್ತದೆ. ವಿಜಯಪುರ ನಗರಸಭೆಯ 5 ವರ್ಷಗಳ ಅವಧಿಯು ದಿನಾಂಕ: 14.07.2019 ರಂದು ಮುಕ್ತಾಯಗೊಂಡಿರುತ್ತದೆ.

ವಿಜಯಪುರ ನಗರಸಭೆಯನ್ನು ವಿಜಯಪುರ ಮಹಾನಗರ ಪಾಲಿಕೆಯನ್ನಾಗಿ ಉನ್ನತೀಕರಿಸಿ ನಗರಾಭಿವೃದ್ಧಿ ಇಲಾಖೆಯು ದಿನಾಂಕ: 20.12.2013 ರಂದು ಅಧಿಸೂಚನೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿರುತ್ತದೆ.

ವಿಜಯಪುರ ನಗರಸಭೆಯನ್ನು ವಿಜಯಪುರ ಮಹಾನಗರ ಪಾಲಿಕೆಯನ್ನಾಗಿ ಉನ್ನತೀಕರಿಸಿದ ನಂತರ ಪ್ರಥಮವಾಗಿ 2019 ರ ಜುಲೈ ಮಾಹೆಗೆ ಮುನ್ನ (ವಿಜಯಪುರ ನಗರಸಭೆಯ ಅವಧಿ ಮುಕ್ತಾಯಕ್ಕೆ ಪೂರ್ವದಲ್ಲಿ) ವಿಜಯಪುರ ಮಹಾನಗರ ಪಾಲಿಕೆಗೆ ಸಾರ್ವತ್ರಿಕ ಚುನಾವಣೆಯನ್ನು ನಡೆಸಬೇಕಿರುತ್ತದೆ. ವಿಜಯಪುರ ಮಹಾನಗರ ಪಾಲಿಕೆಯ ಸಾರ್ವತ್ರಿಕ ಚುನಾವಣೆ ನಡೆಸಲು ಸರ್ಕಾರವು ಕ್ಷೇತ್ರ ವಿಂಗಡಣೆ ಮತ್ತು ಮೀಸಲಾತಿಗಳ ಅಧಿಸೂಚನೆಯನ್ನು ಹೊರಡಿಸಿ ಆಯೋಗಕ್ಕೆ ನೀಡಬೇಕಿರುತ್ತದೆ.

ದಿನಾಂಕ: 07.02.2018 ರಂದು ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಕ್ಷೇತ್ರ ವಿಂಗಡಣೆ ಅಧಿಸೂಚನೆಯನ್ನು ಹಾಗೂ ದಿನಾಂಕ: 10.08.2018 ರಂದು ವಾರ್ಡುವಾರು ಮೀಸಲಾತಿ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಕ್ಷೇತ್ರ ವಿಂಗಡಣೆ ಮತ್ತು ಮೀಸಲಾತಿಗಳ ಅಧಿಸೂಚನೆಗಳನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 204314/2018 ದಾಖಲಾಗಿರುತ್ತದೆ. ಸರ್ಕಾರವು ತಾನು ಹೊರಡಿಸಿದ್ದ ಅಧಿಸೂಚನೆಗಳನ್ನು ಹಿಂಪಡೆದು ಹೊಸದಾಗಿ ಅಧಿಸೂಚನೆಗಳನ್ನು ಹೊರಡಿಸುವುದಾಗಿ ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ರಿಟ್ ಪಿಟಿಷನ್ ಸಂಖ್ಯೆ 204314/2018 ಮತ್ತು ಸಂಬಂಧಿಸಿದ ಪ್ರಕರಣಗಳನ್ನು ದಿನಾಂಕ: 12.11.2019 ರಂದು ಇತ್ಯರ್ಥ ಪಡಿಸಲಾಗಿದ್ದು, ಸಾಧ್ಯವಾದಷ್ಟು ಬೇಗನೆ ಕ್ಷೇತ್ರ ವಿಂಗಡನೆ ಮತ್ತು ಮೀಸಲಾತಿಗಳ ಮರು ಅಧಿಸೂಚನೆಗಳನ್ನು ಹೊರಡಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಿ ಆದೇಶಿಸಲಾಗಿರುತ್ತದೆ.

ಈ ಮಧ್ಯೆ ಸರ್ಕಾರವು ವಿಜಯಪುರ ಮಹಾನಗರ ಪಾಲಿಕೆಗೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ರವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ದಿನಾಂಕ: 24.07.2019 ರಂದು ಅಧಿಸೂಚನೆ ಹೊರಡಿಸಿದ್ದು, ಸದರಿ ಅಧಿಸೂಚನೆಯನ್ನು ರದ್ದುಗೊಳಿಸಲು ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 35/2020 ದಾಖಲಾಗಿರುತ್ತದೆ.

ರಿಟ್ ಪಿಟಿಷನ್ ಸಂಖ್ಯೆ 35/2020ರ ಕುರಿತು ದಿನಾಂಕ: 10.12.2020 ರಂದು ಮಾನ್ಯ ಉಚ್ಚ ನ್ಯಾಯಾಲಯವು ಹೊರಡಿಸಲಾದ ಆದೇಶದಲ್ಲಿ ಕ್ಷೇತ್ರ ವಿಂಗಡಣೆ, ಮೀಸಲಾತಿ, ಮತದಾರರ ಪಟ್ಟಿ ತಯಾರಿ ಮತ್ತು ಚುನಾವಣಾ ವೇಳಾಪಟ್ಟಿ ಹೊರಡಿಸಲು ಕಾಲಮಿತಿ ನಿಗದಿಪಡಿಸಲಾಗಿರುತ್ತದೆ.

ರಿಟ್ ಪಿಟಿಷನ್ ಸಂಖ್ಯೆ 35/2020ರ ಕುರಿತು ದಿನಾಂಕ: 10.12.2020 ರಂದು ಹೊರಡಿಸಲಾದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ಸಂಖ್ಯೆ 92/2021 ರಂತೆ ಪ್ರಕರಣ ದಾಖಲಿಸಲಾಗಿರುತ್ತದೆ.

ಎಸ್.ಎಲ್.ಪಿ ಸಂಖ್ಯೆ 92/2021 ಕುರಿತು ದಿನಾಂಕ: 03.02.2021 ರಂದು ನಡೆದ ವಿಚಾರಣೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ 35/2020ರ ಕುರಿತು ದಿನಾಂಕ: 10.12.2020 ರಂದು ನೀಡಿದ್ದ ಆದೇಶಕ್ಕೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. ದಿನಾಂಕ: 20.05.2022 ರಂದು ನಡೆದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ವಿಚಾರಣೆಯಲ್ಲಿ ರಿಟ್ ಪಿಟಿಷನ್ ಸಂಖ್ಯೆ 35/2020ಕ್ಕೆ ಸಂಬಂಧಿಸಿದಂತೆ ದಿನಾಂಕ: 03.02.2021 ರಂದು ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿ 8 ವಾರಗಳೊಳಗಾಗಿ ವಿಜಯಪುರ ಮಹಾನಗರ ಪಾಲಿಕೆಗೆ ಕ್ಷೇತ್ರ ವಿಂಗಡಣೆ ಮತ್ತು ವಾರ್ಡುವಾರು ಮೀಸಲಾತಿ ಒದಗಿಸಲು ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತದೆ ಹಾಗೂ ಕ್ಷೇತ್ರ ವಿಂಗಡನೆ ಮತ್ತು  ವಾರ್ಡುವಾರು ಮೀಸಲಾತಿ ಲಭ್ಯವಾದ ಕೂಡಲೇ ವಿಳಂಬ ಮಾಡದೆ ನಿಯಮಾನುಸಾರ ಚುನಾವಣಾ ಪ್ರಕ್ರಿಯೆ ಪ್ರಾರಂಭಿಸಿ ಚುನಾವಣೆ ನಡೆಸಿ ತಾರ್ಕಿಕ ಅಂತ್ಯ ತಲುಪಲು ಕ್ರಮವಹಿಸುವಂತೆ ಆಯೋಗಕ್ಕೆ ನಿರ್ದೇಶನ ನೀಡಲಾಗಿರುತ್ತದೆ.

ಸರ್ಕಾರವು ವಿಜಯಪುರ ಮಹಾನಗರ ಪಾಲಿಕೆಯ ಕ್ಷೇತ್ರ ವಿಂಗಡಣೆ ಅಧಿಸೂಚನೆಯನ್ನು ದಿನಾಂಕ: 02.07.2022 ರಂದು ಹೊರಡಿಸಿರುತ್ತದೆ. ವಿಜಯಪುರ ಮಹಾನಗರ ಪಾಲಿಕೆಯ ಕ್ಷೇತ್ರ ವಿಂಗಡನೆ ಅಧಿಸೂಚನೆಯನ್ನಾಧರಿಸಿ ವಿಜಯಪುರ ಮಹಾನಗರ ಪಾಲಿಕೆಯ ವಾರ್ಡುವಾರು ಮತದಾರರ ಪಟ್ಟಿ ತಯಾರಿಸಲು ಆಯೋಗದಿಂದ ಸೂಚನೆಗಳನ್ನು ನೀಡಲಾಗಿರುತ್ತದೆ. ಸರ್ಕಾರವು ವಿಜಯಪುರ ಮಹಾನಗರ ಪಾಲಿಕೆಯ ಮೀಸಲಾತಿ ಅಧಿಸೂಚನೆಯನ್ನು ದಿನಾಂಕ: 25.09.2022 ರಂದು ಹೊರಡಿಸಿರುತ್ತದೆ. ವಿಜಯಪುರ ಮಹಾನಗರ ಪಾಲಿಕೆಯ ಮೀಸಲಾತಿ ಅಧಿಸೂಚನೆಯನ್ನಾಧರಿಸಿ ಆಯೋಗದಿಂದ ಚುನಾವಣಾ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

ದಿನಾಂಕ: 25.09.2022 ರಂದು ಹೊರಡಿಸಲಾದ ವಿಜಯಪುರ ಮಹಾನಗರ ಪಾಲಿಕೆಯ ಮೀಸಲಾತಿ ಪ್ರಶ್ನಿಸಿ ಮತ್ತೊಮ್ಮೆ ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದಲ್ಲಿ ರಿಟ್ ಪಿಟಿಷನ್ ಸಂಖ್ಯೆ 202474/2022 ದಾಖಲಿಸಲಾಗಿರುತ್ತದೆ. ಆಯೋಗವು ವಿಜಯಪುರ ಮಹಾನಗರ ಪಾಲಿಕೆಗೆ ಚುನಾವಣೆಯನ್ನು ನಡೆಸಲು ಚುನಾವಣಾ ವೇಳಾಪಟ್ಟಿ ಹೊರಡಿಸಿದ್ದು, ಚುನಾವಣಾ ಪ್ರಕ್ರಿಯೆ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ಸ್ಥಳೀಯ ಸಂಸ್ಥೆಯ ಅವಧಿ ಮುಕ್ತಾಯಗೊಂಡು 03 ವರ್ಷಗಳು ಕಳೆದಿರುವ ಕಾರಣ, ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠವು ಸದರಿ ರಿಟ್ ಪಿಟಿಷನ್ ಅನ್ನು ದಿನಾಂಕ: 14.10.2022ರ ಆದೇಶದಲ್ಲಿ ವಜಾಗೊಳಿಸಿರುತ್ತದೆ.

ಅಂತಿಮವಾಗಿ, ವಿಜಯಪುರ ಮಹಾನಗರ ಪಾಲಿಕೆಗೆ ಹೊರಡಿಸಲಾದ ಚುನಾವಣಾ ವೇಳಾಪಟ್ಟಿಯನ್ವಯ ದಿನಾಂಕ: 28.10.2022 ರಂದು ಮತದಾನ ಮತ್ತು ದಿನಾಂಕ: 31.10.2022 ರಂದು ಮತ ಎಣಿಕೆಯೊಂದಿಗೆ ಚುನಾವಣೆ ನಡೆಸಲಾಗಿರುತ್ತದೆ.

**ವಿಜಯಪುರ ಮಹಾನಗರ ಪಾಲಿಕೆ ಸಾರ್ವತ್ರಿಕ ಚುನಾವಣೆ - 2022**

**ಆಯೋಗದ ಆದೇಶ ಸಂಖ್ಯೆ: ರಾಚುಆ 147 ಇಯುಬಿ 2022 ದಿನಾಂಕ: 03.10.2022**

**ಚುನಾವಣಾ ವೇಳಾಪಟ್ಟಿ**

| | | |
|---|---|---|
| 1 | ಜಿಲ್ಲಾಧಿಕಾರಿಗಳು ಚುನಾವಣಾ ಅಧಿಸೂಚನೆಯನ್ನು ಹೊರಡಿಸುವ ದಿನಾಂಕ ಮತ್ತು ದಿನ | 10.10.2022 (ಸೋಮವಾರ) |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ದಿನ | 17.10.2022 (ಸೋಮವಾರ) |
| 3 | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ದಿನ | 18.10.2022 (ಮಂಗಳವಾರ) |
| 4 | ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ದಿನ | 20.10.2022 (ಗುರುವಾರ) |
| 5 | ಮತದಾನ ಅವಶ್ಯಕವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆಗಳ ವರೆಗೆ) | **28.10.2022 (ಶುಕ್ರವಾರ)** |
| 6 | ಮರು ಮತದಾನ ಇದ್ದಲ್ಲಿ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆಗಳ ವರೆಗೆ) | 30.10.2022 (ಭಾನುವಾರ) |
| 7 | ಮತಗಳ ಎಣಿಕೆಯ ದಿನಾಂಕ ಮತ್ತು ದಿನ (ಬೆಳಿಗ್ಗೆ 8.00 ಗಂಟೆಯಿಂದ) (ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ) | **31.10.2022 (ಸೋಮವಾರ)** |
| 8 | ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳಿಸಬೇಕೋ ಆ ದಿನಾಂಕ ಮತ್ತು ದಿನ | 31.10.2022 (ಸೋಮವಾರ) |

## ಚುನಾವಣೆ ನಡೆದ ನಗರ ಸ್ಥಳೀಯ ಸಂಸ್ಥೆ ಮತ್ತು ವಾರ್ಡ್‌ಗಳು

| ಕ್ರ. ಸಂ | ಜಿಲ್ಲೆ | ತಾಲ್ಲೂಕಿನ ಹೆಸರು | ನಗರ ಸ್ಥಳೀಯ ಸಂಸ್ಥೆಯ ಹೆಸರು | | ಒಟ್ಟು ವಾರ್ಡ್‌ಗಳು |
|---|---|---|---|---|---|
| 1 | ವಿಜಯಪುರ | ವಿಜಯಪುರ | 1 | ವಿಜಯಪುರ ಮಹಾನಗರ ಪಾಲಿಕೆ | 35 |

## ಮತಗಟ್ಟೆಗಳ ಮತ್ತು ಮತದಾರರ ಅಂಕಿ ಅಂಶಗಳು

| ಒಟ್ಟು ಮತಗಟ್ಟೆಗಳು | ಮತದಾರರು | | | |
|---|---|---|---|---|
| | ಪುರುಷ | ಮಹಿಳೆ | ಇತರೆ | ಒಟ್ಟು |
| 303 | 143329 | 144498 | 100 | 287927 |

## ಚುನಾವಣಾಧಿಕಾರಿಗಳು ಮತ್ತು ಸಹಾಯಕ ಚುನಾವಣಾಧಿಕಾರಿಗಳ ಅಂಕಿ ಅಂಶಗಳ ಘೋಷ್ವಾರೆ

| ಒಟ್ಟು ಚುನಾವಣಾಧಿಕಾರಿಗಳು | ಒಟ್ಟು ಸಹಾಯಕ ಚುನಾವಣಾಧಿಕಾರಿಗಳು |
|---|---|
| 07 | 07 |

**ಅಂಕಿ ಅಂಶಗಳ ಘೋಷ್ವಾರೆ**

| | | |
|---|---|---|
| 1 | ಸ್ವೀಕೃತವಾದ ಒಟ್ಟು ನಾಮಪತ್ರಗಳು | 358 |
| 2 | ನಾಮಪತ್ರಗಳ ಪರಿಶೀಲನೆಯಲ್ಲಿ ತಿರಸ್ಕೃತರಾದ ನಾಮಪತ್ರಗಳ ಒಟ್ಟು ಸಂಖ್ಯೆ | 119 |
| 3 | ನಾಮಪತ್ರಗಳ ಪರಿಶೀಲನೆ ನಂತರ ಕ್ರಮಬದ್ದವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಒಟ್ಟು ಸಂಖ್ಯೆ | 230 |
| 4 | ಉಮೇದುವಾರಿಕೆಗಳನ್ನು ಹಿಂತೆಗೆದುಕೊಂಡ ಅಭ್ಯರ್ಥಿಗಳ ಒಟ್ಟು ಸಂಖ್ಯೆ | 56 |
| 5 | ನಾಮಪತ್ರಗಳನ್ನು ಹಿಂತೆಗೆದುಕೊಂಡ ನಂತರ ಅವಿರೋಧವಾಗಿ ಆಯ್ಕೆಯಾದ ಅಭ್ಯರ್ಥಿಗಳ ಒಟ್ಟು ಸಂಖ್ಯೆ | 0 |
| 6 | ನಾಮಪತ್ರಗಳನ್ನು ಹಿಂತೆಗೆದುಕೊಂಡ ನಂತರ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ | 174 |

## ಸ್ವೀಕೃತವಾದ ಒಟ್ಟು ನಾಮಪತ್ರಗಳ ಅಂಕಿ ಅಂಶಗಳು

| ಕ್ರ. ಸಂ | ಜಿಲ್ಲೆಯ ಹೆಸರು | ನ.ಸ್ಥ.ಸಂ. ಹೆಸರು | ಒಟ್ಟು ವಾರ್ಡ್‌ಗಳು | ನಾಮಪತ್ರ ಬಾರದೇ ಇರುವ ವಾರ್ಡ್‌ಗಳ ಸಂಖ್ಯೆ | ಐ.ಎನ್.ಸಿ. | ಬಿ.ಜೆ.ಪಿ. | ಜೆ.ಡಿ.ಎಸ್. | ಬಿ.ಎಸ್.ಪಿ. | ಕೆ.ಆರ್.ಎಸ್. | ಎ.ಎ.ಪಿ. | ಎ.ಐ.ಎಂ.ಐ.ಎಂ | ಸಮಾಜವಾದಿ ಪಾರ್ಟಿ | ಜನತಾ ಪಾರ್ಟಿ | ಎಸ್.ಡಿ.ಪಿ.ಐ | ಪಕ್ಷೇತರರು | ಒಟ್ಟು |
|---|---|---|---|---|---|---|---|---|---|---|---|---|---|---|---|---|
| 1 | ವಿಜಯಪುರ | ಮಹಾನಗರ ಪಾಲಿಕೆ | 35 | 0 | 65 | 93 | 25 | 1 | 3 | 19 | 4 | 2 | 3 | 3 | 140 | 358 |

## ನಾಮಪತ್ರ ಪರಿಶೀಲನೆ ನಂತರ ತಿರಸ್ಕೃತವಾದ ನಾಮಪತ್ರಗಳ/ ಅಭ್ಯರ್ಥಿಗಳ ಮತ್ತು ಕ್ರಮಬದ್ಧವಾಗಿ ನಾಮ ನಿರ್ದೇಶಿತರಾದ ಅಭ್ಯರ್ಥಿಗಳ ಅಂಕಿ ಅಂಶಗಳು

| ಕ್ರ. ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ನ.ಸ್ಥ.ಸಂ. ಹೆಸರು | ಒಟ್ಟು ವಾರ್ಡ್‌ಗಳು | ನಾಮಪತ್ರ ಬಾರದೇ ಇರುವ ವಾರ್ಡ್‌ಗಳ ಸಂಖ್ಯೆ | ಸ್ವೀಕೃತವಾದ ಒಟ್ಟು ನಾಮಪತ್ರಗಳ ಸಂಖ್ಯೆ | ತಿರಸ್ಕೃತವಾದ ಒಟ್ಟು ನಾಮಪತ್ರಗಳ ಸಂಖ್ಯೆ | ಕ್ರಮಬದ್ಧವಾಗಿ ನಾಮ ನಿರ್ದೇಶಿತರಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|---|---|
| 1 | ವಿಜಯಪುರ | ವಿಜಯಪುರ | ಮಹಾನಗರ ಪಾಲಿಕೆ | 35 | 0 | 358 | 119 | 230 |

## ನಾಮಪತ್ರ ಹಿಂತೆಗೆದುಕೊಂಡ ನಂತರ ಅಂತಿಮವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | ನ.ಸ್ಥ.ಸಂ. ಹೆಸರು | ಒಟ್ಟು ವಾರ್ಡ್‌ಗಳು | ನಾಮಪತ್ರ ಬಾರದೇ ಇರುವ ವಾರ್ಡ್‌ಗಳ ಸಂಖ್ಯೆ | ಅವಿರೋಧ ವಾಗಿ ಆಯ್ಕೆ ಯಾದ ಸದಸ್ಯರ ಸಂಖ್ಯೆ | ಚುನಾವಣೆ ನಡೆಯಲಿ ರುವ ವಾರ್ಡ್‌ಗಳ ಸಂಖ್ಯೆ | ಐ.ಎನ್.ಸಿ | ಬಿ.ಜೆ.ಪಿ | ಜೆ.ಡಿ.ಎಸ್. | ಬಿ.ಎಸ್.ಪಿ | ಕೆ.ಆರ್.ಎಸ್ | ಎ.ಎ.ಪಿ. | ಎ.ಐ.ಎಂ.ಐ.ಎಂ | ಜನತಾ ಪಾರ್ಟಿ | ಎಸ್.ಡಿ.ಪಿ.ಐ | ಪಕ್ಷೇತರರು | ಒಟ್ಟು |
|---|---|---|---|---|---|---|---|---|---|---|---|---|---|---|---|---|---|
| 1 | ವಿಜಯಪುರ | ಮಹಾನಗರ ಪಾಲಿಕೆ | 35 | 0 | 0 | 35 | 35 | 33 | 20 | 1 | 3 | 15 | 4 | 3 | 2 | 58 | 174 |

## ವಿಜಯಪುರ ಮಹಾನಗರಪಾಲಿಕೆ ಸಾರ್ವತ್ರಿಕ ಚುನಾವಣೆ-2022

### ದಿನಾಂಕ: 28.10.2022 ರಂದು ಮತದಾನದ ಶೇಕಡವಾರು ವಿವರ

| ಕ್ರ.ಸಂ | ಜಿಲ್ಲೆ | ನ.ಸ್ಥ.ಸಂ ಹೆಸರು | ವಾರ್ಡ್ ಸಂಖ್ಯೆ | ಮತಗಟ್ಟೆ ಸಂಖ್ಯೆ | ಆಕ್ಸಿಲರಿ ಮತಗಟ್ಟೆಗಳು | ಒಟ್ಟು ಮತಗಟ್ಟೆಗಳು | ಒಟ್ಟು ಮತದಾರರ ಸಂಖ್ಯೆ | | | | ಒಟ್ಟು ಮತಚಲಾಯಿಸಿದವರ ಸಂಖ್ಯೆ | | | | ಶೇಕಡವಾರು ಮತದಾನ |
|---|---|---|---|---|---|---|---|---|---|---|---|---|---|---|---|
| | | | | | | | ಗಂಡು | ಹೆಣ್ಣು | ಇತರೆ | ಒಟ್ಟು | ಗಂಡು | ಹೆಣ್ಣು | ಇತರೆ | ಒಟ್ಟು | |
| 1 | ವಿಜಯಪುರ | ವಿಜಯಪುರ ಮಹಾನಗರ ಪಾಲಿಕೆ | 1 | 8 | 0 | 8 | 4227 | 4097 | 0 | **8324** | 2174 | 1995 | 0 | **4169** | **50.08** |
| 2 | | | 2 | 10 | 0 | 10 | 5219 | 5413 | 3 | **10635** | 3676 | 3627 | 0 | **7303** | **68.67** |
| 3 | | | 3 | 10 | 0 | 10 | 4677 | 4783 | 1 | **9461** | 2485 | 2365 | 0 | **4850** | **51.26** |
| 4 | | | 4 | 6 | 0 | 6 | 3411 | 3180 | 0 | **6591** | 2629 | 2507 | 0 | **5136** | **77.92** |
| 5 | | | 5 | 6 | 0 | 6 | 3334 | 3210 | 2 | **6546** | 1517 | 1400 | 0 | **2917** | **44.56** |
| 6 | | | 6 | 6 | 0 | 6 | 3284 | 3273 | 1 | **6558** | 1692 | 1562 | 0 | **3254** | **49.62** |
| 7 | | | 7 | 12 | 0 | 12 | 5354 | 5488 | 4 | **10846** | 2881 | 2714 | 0 | **5595** | **51.59** |
| 8 | | | 8 | 12 | 0 | 12 | 5631 | 5672 | 1 | **11304** | 3269 | 3007 | 0 | **6276** | **55.52** |
| 9 | | | 9 | 6 | 0 | 6 | 2827 | 2879 | 1 | **5707** | 1671 | 1459 | 0 | **3130** | **54.84** |
| 10 | | | 10 | 7 | 0 | 7 | 2726 | 2382 | 1 | **5109** | 1552 | 1363 | 0 | **2915** | **57.06** |
| 11 | | | 11 | 12 | 0 | 12 | 4712 | 4872 | 8 | **9592** | 2705 | 2590 | 0 | **5295** | **55.20** |
| 12 | | | 12 | 8 | 0 | 8 | 3687 | 3580 | 1 | **7268** | 1994 | 1839 | 0 | **3833** | **52.74** |
| 13 | | | 13 | 10 | 0 | 10 | 3909 | 4155 | 1 | **8065** | 2314 | 2250 | 0 | **4564** | **56.59** |
| 14 | | | 14 | 11 | 0 | 11 | 4687 | 4944 | 1 | **9632** | 2592 | 2750 | 0 | **5342** | **55.46** |
| 15 | | | 15 | 3 | 0 | 3 | 1294 | 1288 | 1 | **2583** | 972 | 902 | 0 | **1874** | **72.55** |
| 16 | | | 16 | 10 | 0 | 10 | 4537 | 4625 | 1 | **9163** | 2866 | 2896 | 0 | **5762** | **62.88** |
| 17 | | | 17 | 6 | 0 | 6 | 2826 | 2776 | 0 | **5602** | 2050 | 1955 | 0 | **4005** | **71.49** |
| 18 | | | 18 | 12 | 0 | 12 | 5397 | 5660 | 8 | **11065** | 2745 | 2773 | 0 | **5518** | **49.87** |
| 19 | | | 19 | 9 | 0 | 9 | 4298 | 4324 | 0 | **8622** | 2348 | 2238 | 0 | **4586** | **53.19** |
| 20 | | | 20 | 11 | 0 | 11 | 6072 | 6133 | 3 | **12208** | 3461 | 3215 | 0 | **6676** | **54.69** |
| 21 | | | 21 | 13 | 0 | 13 | 6194 | 6035 | 2 | **12231** | 3270 | 2981 | 0 | **6251** | **51.11** |
| 22 | | | 22 | 12 | 0 | 12 | 5590 | 5557 | 7 | **11154** | 2879 | 2686 | 0 | **5565** | **49.89** |
| 23 | | | 23 | 10 | 0 | 10 | 4313 | 4412 | 0 | **8725** | 2289 | 2181 | 0 | **4470** | **51.23** |
| 24 | | | 24 | 8 | 0 | 8 | 4254 | 4409 | 3 | **8666** | 2601 | 2471 | 0 | **5072** | **58.53** |
| 25 | | | 25 | 7 | 0 | 7 | 3868 | 3913 | 0 | **7781** | 2091 | 1861 | 0 | **3952** | **50.79** |
| 26 | | | 26 | 5 | 0 | 5 | 2099 | 2151 | 3 | **4253** | 1312 | 1252 | 0 | **2564** | **60.29** |
| 27 | | | 27 | 7 | 0 | 7 | 3122 | 3113 | 18 | **6253** | 1567 | 1334 | 0 | **2901** | **46.39** |
| 28 | | | 28 | 9 | 0 | 9 | 4562 | 4661 | 3 | **9226** | 2781 | 2485 | 0 | **5266** | **57.08** |
| 29 | | | 29 | 10 | 0 | 10 | 4712 | 4683 | 1 | **9396** | 2456 | 2170 | 0 | **4626** | **49.23** |
| 30 | | | 30 | 9 | 0 | 9 | 4291 | 4189 | 1 | **8481** | 2444 | 2196 | 0 | **4640** | **54.71** |
| 31 | | | 31 | 9 | 0 | 9 | 4148 | 4219 | 9 | **8376** | 2361 | 2173 | 0 | **4534** | **54.13** |
| 32 | | | 32 | 8 | 0 | 8 | 3716 | 3920 | 4 | **7640** | 2272 | 2168 | 0 | **4440** | **58.12** |
| 33 | | | 33 | 7 | 0 | 7 | 3152 | 3156 | 1 | **6309** | 1797 | 1656 | 0 | **3453** | **54.73** |
| 34 | | | 34 | 7 | 0 | 7 | 3370 | 3413 | 5 | **6788** | 1953 | 1861 | 0 | **3814** | **56.19** |
| 35 | | | 35 | 7 | 0 | 7 | 3829 | 3933 | 5 | **7767** | 2209 | 2100 | 0 | **4309** | **55.48** |
| | | | **ಒಟ್ಟು** | **303** | **0** | **303** | **143329** | **144498** | **100** | **287927** | **81875** | **76982** | **0** | **158857** | **55.17** |

**ಮತಗಳ ಎಣಿಕೆ ನಂತರ ಚುನಾಯಿತರಾದ ಅಭ್ಯರ್ಥಿಗಳ ಅಂಕಿ ಅಂಶಗಳು**

| ಕ್ರ. ಸಂ | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ನ.ಸ್ಥ.ಸಂ. ಹೆಸರು | ಒಟ್ಟು ವಾರ್ಡ್‌ಗಳು | ಐ.ಎನ್.ಸಿ. | ಬಿ.ಜೆ.ಪಿ | ಜೆ.ಡಿ.ಎಸ್. | ಎ.ಐ.ಎಂ. ಐ.ಎಂ. | ಪಕ್ಷೇತರ | ಒಟ್ಟು |
|---|---|---|---|---|---|---|---|---|---|---|
| 1 | ವಿಜಯಪುರ | ವಿಜಯಪುರ | ಮಹಾನಗರ ಪಾಲಿಕೆ | 35 | 10 | 17 | 1 | 2 | 5 | 35 |